ದುಪ್ಪಟ್ಟು ಮಾಡಿತು.

ಅವಳೂರಿನ ಪದ್ಧತಿಯಂತೆ ಅಲ್ಲಿಂದಲೇ ತಂದುಕೊಂಡಿದ್ದ ಆ ಕಡೆಯ ಸೀರೆ ಉಟ್ಟು ತಲೆ ಮೇಲೆ ಸೆರಗು ಹೊದ್ದುಕೊಂಡಿದ್ದರೂ ಮುಖದಲ್ಲಿನ ಕಣ್ಣುಗಳು ಮೀನಿನಂತೆ ಹೊಳೆದು ಚಲಿಸುವುದನ್ನು ಕಾಣಬಹುದಿತ್ತು. ಅತ್ತೆ ಮನೆ ಬುಲಾಕು, ಮೂಗುಬಟ್ಟಿನ ಸಿಂಗಾರವಿದ್ದ ಮೂಗಿನ ಅಡಿಯ ತುಟಿಗಳು ಮೆಲು ನಗೆಯಿಂದ ಆಕರ್ಷಿಸಿ ನೋಡುಗರ ಕಣ್ಣನ್ನು ಸೆಳೆಯುತ್ತಿತ್ತು.

ಈಗ ಏಳು ವರ್ಷದ ಹಿಂದೆ ಹೀಗಿದ್ದ ಗಂಗೆ ಒಮ್ಮೆ ಮಾತ್ರ ಹೆಜ್ಜೆ ತಪ್ಪಿ, ಈಗ ಮಾನಸಿಕ ಹಿಂಸೆ ಅನುಭವಿಸುತ್ತಾ ಒಂಟಿಯಾಗಿ ಮಗುವನ್ನು ಒಬ್ಬಳೇ ಪಾಲಿಸುತ್ತಿದ್ದಾಳೆ. ಜನರ ಬಾಯಲ್ಲಿ ಕೀಳಾಗಿ ಅನ್ನಿಸಿಕೊಳ್ಳುತ್ತಾಳೆ. ಅಸ್ಪೃಶ್ಯಳ ಬಾಳು ಅವಳದ್ದಾಗಿದೆ. ಹೀಗೆಲ್ಲಾ ಆಗಲು ಕಾರಣ ತಾನೇ ಎಂದು ಎಂದೂ ತಪ್ಪು ತನ್ನ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ನನ್ನನ್ನು ಈ ಸ್ಥಿತಿಗೆ ತಂದದರ ಮೂಲ ಕಾರಣ ಗಂಡ ಶಿವಣ್ಣನೇ ಎಂದು ಅವಳ ತರ್ಕ ಹೇಳುತ್ತಿತ್ತು. ಈ ಸ್ಥಿತಿಗೆ ತಂದುದ್ದಕ್ಕಾಗಿ ಅವನನ್ನು ದ್ವೇಷಿಸುತ್ತಿದ್ದಳು.

ಈಗ ತಾನೇ ಅವಳ ಶತ್ರು ಹೊರಟು ಹೋದ ಮೇಲೆ ಗಂಗಾಗೆ ಮಗಳ ಸಾಮಿಪ್ಯ ಬೇಕಾಯಿತು. ಹೋಗಿ ನೋಡಿದಾಗ ಅವಳು ಸಡಗರದಿಂದ ತಾಯಿಗೆ ಹೇಳಿದಳು.

'ಅವ್ವಾ... ನೋಡಿಲ್ಲಿ... ಗೊಂಬಿಗೆ ಲಗ್ನ ಮಾಡ್ಲಿಕ್ಕೆ ಹತ್ತೀನಿ... ನೀನೂ ಬಾರವ್ವಾ... ಕುಂದ್ರು...' ದೇವಸ್ಥಾನದಲ್ಲಿ ಆಗುವ ಮದುವೆಗಳನ್ನ ಅದೆಷ್ಟೋ ಬಾರಿ ಕಂಡಿದ್ದ ಆ ಮಗುವು, ಗಂಗೆ ಮಾಡಿಕೊಟ್ಟಿದ್ದ ಬಟ್ಟೆ ಗೊಂಬೆಗಳನ್ನು ಗಾಡಿ ಖಾನೆ ಪಕ್ಕದ ಓಣಿಯಲ್ಲಿ ಕೂರಿಸಿ ಪೌರೋಹಿತ್ಯ ನಡೆಸುತ್ತಿದ್ದಳು. ಅವಳು ಶಿವಣ್ಣ ಬಂದಿದ್ದರೂ ಅವನಿದ್ದಲ್ಲಿ ಹೋಗಲೇ ಇಲ್ಲ. ಅಮ್ಮ ಕೈಗಿತ್ತ ಉಂಡಿ ಮುಗಿಸಿ ಮದುವೆ ಆಟದಲ್ಲಿ ಮಗ್ನಳಾಗಿಬಿಟ್ಟಳು. ಪುಳ್ಳಂಪಚ್ಚಿ ಹಸಿರು ಕಾಯಿಗಳೇ ಬಾಳೆಹಣ್ಣುಗಳು, ಯಾವುದೊ ಎಲೆ ಮತ್ತು ಸಣ್ಣ ಕಲ್ಲುಗಳು ವೀಳ್ಯವಾಯಿತು. ಬಾಟ್ಲಿ ಮುಚ್ಚಳದಲ್ಲಿ ಮಣ್ಣು, ನೀರು ಕಲಸಿ ಆರತಿ ಮಾಡಿಕೊಂಡಿದ್ದಳು. ಪೀಪಿ ಹೂ ಹೆಣೆದು ಮದುಮಕ್ಕಳಿಗೆ ಹಾರ ಪೋಣಿಸಿದ್ದಳು, ಮರಳು ಅಕ್ಷತೆಯಾದರೆ, ಕಲ್ಲು ಚೂರು ಬೆಲ್ಲವಾಯಿತು. ಹರಕು ಬಟ್ಟೆ ಸುತ್ತಿಕೊಂಡು, ಹಸಿದಾರ ಜನಿವಾರ ಧರಿಸಿ ಹುಡುಗಿ ಪುರೋಹಿತ ಕಾರ್ಯ ನೆರವೇರಿಸಿಬಿಟ್ಟಳು. ಇನ್ನು ಭೋಜನದ ವ್ಯವಸ್ಥೆ ಆಗಬೇಕಿದೆಯಲ್ಲ! ಬೆಲ್ಲ ಕೊಬ್ಬರಿಯ ಭೋಜನಕ್ಕೆ ಅವ್ವನನ್ನೇ ಕಾದಳು. ಅವಳು ಬಂದ ಕೂಡಲೇ ತನ್ನ ಏರ್ಪಾಡೆಲ್ಲಾ ತೋರಿಸಿ ಕೊಬ್ಬರಿ, ಬೆಲ್ಲ, ಪುಟಾಣಿ ಕೊಡುವಂತೆ ಕೇಳಿದಳು.

ಇದನ್ನೆಲ್ಲಾ ಗಮನಿಸಿದ ಗಂಗೆ ನಸುನಗುತ್ತಾ ಕೇಳಿದಳು,

'ಎಲ್ಲ ಛಲೋ ಆತು... ಮದ್ವಿ ಹುಡ್ಗಿ ಕತ್ತಿಗೆ ತಾಳಿ ಎಲ್ಲೈತೆ...?'

ಇಂದ್ರಾ ಗಾಂಧಿ ತನ್ನ ಮರೆವಿಗಾಗಿ ತಾನೇ ಬೆರಳಲ್ಲಿ ತಲೆ ಕುಟ್ಟಿಕೊಂಡಳು.

'ಅಯ್ಯೋ... ಮರ್ತೇಬಿಟ್ನವ್ವಾ... ಕರಿಮಣಿ ಏಕೆ... ಗೌರಿ ಹಬ್ಬದಾಗ ಮಾರ್ಕೆಟ್‌ನಲ್ಲಿ ಯಾರೊ ಬೀಳ್ಸಿದ್ದ ಕರಿಮಣಿ ಕುಚ್ಚು ಸಿಕ್ಕಲ್ಲಾ... ಇರು ತರ್‍ತೀನಿ... ನನ್ನ ತಾವೇ ಐತೆ... ಅದ್ನೇ ಕಟ್ಟಿಬಿಡ್ತೀನಿ...' ಗಂಗೆ ಜೋರಾಗಿ ನಕ್ಕಳು' ಅಲ್ವೇ ಪೋರೀ... ತಾಳೀನ ಪುರೋಹಿತ್ರು ಕಟ್ಟಬಾರ್ದು... ಗಂಡ ಹೆಂಣ್ತೀಗೆ ತಾಳಿ ಕಟ್ಟಬೇಕು...'

'ಆದ್ರ... ಗಂಡ ಗೊಂಬಿ ಅದಾನೆ... ಅವ್ನಿಗೆ ಎಲ್ಲಿ ತಾಳೀ ಕಟ್ಲಿಕ್ಕೆ ಆದೀತು? ನಾನೂ, ನೀನೂ ಹೆಣ್ಣ ಹೆಂಗ್ಸರು ಅದೀವಿ... ಈಗ ತಾನೇ ಆ... ಮಾವಾ... ಕಹೀ ಔಷಧಿ ಕೊಡೊ ಮಾವ ಬಂದಿದ್ರಲ್ಲಾ... ಅವ್ರಿಗೇ ಹೇಳಿ ಈ ನನ್ನ ಚಲುವೀಗೆ ತಾಳಿ ಕಟ್ಸ ಬಿಡಬೇಕಿತ್ತು...'

'ಅವ್ನ ಬ್ಯಾಡ ಬಿಡವ್ವಾ... ನನ್ನನ್ನೇ ಗಂಡಸು ಅಂದ್ಕೊ... ನಾನೇ ಮದುಮಗಳಿಗೆ ತಾಳಿ ಕಟ್‌ತೀನಿ... ಆಯ್ತಾ...?'

ಪಾಪೂಳ ಕಣ್ಣುಗಳು ಗಂಗೆ ಕೊರಳತ್ತ ಹೋಯಿತು. ಅವಳ ಕೊರಳಲ್ಲಿ ಕರಿಮಣಿ ತಾಳಿ ಇನ್ನೂ ಇತ್ತು. ಗಂಡನನ್ನು ಬಿಟ್ಟರೂ ಆತ ಕಟ್ಟಿದ್ದ ತಾಳಿ ಮಾತ್ರ ಏಕೊ ಏನೊ ಅವಳು ತೆಗೆದು ಬಿಸಾಕಿರಲಿಲ್ಲ. ಅದನ್ನು ಗಮನಿಸಿದ್ದ ಇಂದ್ರಾ ಗಾಂಧಿ ಹೇಳಿದಳು.

'ಅವ್ವಾ... ನಿಂಗ ಯಾರು ತಾಳೀ ಕಟ್ಟಿದ್ರು...?'

ಅವಳಿಗೆ ಏನು ಉತ್ತರಿಸಲಿ ಎಂದು ಗಂಗೆ ಗಲಿಬಿಲಿ ಕೊಂಡಳು. ಪಾಪುಗೆ ಹಿಂದೊಮ್ಮೆ ಅವಳ ತಂದೆ 'ದೇವರು' ಎಂದು ಹೇಳಿದಳು. ಕೂಸು ಅದನ್ನೇ ನಂಬಿತ್ತು. ಆದರೆ ಪಾಪು ಬೆಳೆದಂತೆಲ್ಲಾ ಇಂತಹ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಷ್ಟವಾದೀತು. ಈಗಾಗಲೇ ಅವಳಲ್ಲಿ ಕುತೂಹಲ ಮೊಳೆಯಲು ಪ್ರಾರಂಭವಾಗಿತ್ತು. ಈ ಮೊದಲು ಎಂದೂ ತನ್ನ ತಾಳಿ ಬಗ್ಗೆ ಪ್ರಶ್ನಿಸಿದವಳೇ ಅಲ್ಲ... ಶಿಶುವಾಗಿದ್ದಾಗ ಆ ತಾಳಿ ಹಿಡಿದುಕೊಂಡು ಆಡಾಡುತ್ತ ಮೊಲೆ ಹಾಲು ಕುಡಿಯುತ್ತಿದ್ದಳು. ಪುಟ್ಟ ಕೈ ಹಿಡಿತದ ತಾಳಿ ಜಾರಿ ಬಿಟ್ಟರೆ ಹಾಲು ಕುಡಿಯುವುದನ್ನೂ ನಿಲ್ಲಿಸಿಬಿಡುತ್ತಿದ್ದಳು. ಮತ್ತೆ ಕೈಗೆ ಕರಿಮಣಿ ಸಿಕ್ಕರೆ ಸೊರ ಸೊರ ಹಾಲು ಹೀರಿ ಬಿಡುತ್ತಿದ್ದಳು.

ಪಾಪುಗೆ ಮರುತ್ತರ ಕೊಡದೆ ಗಂಗೆ ಮಾತು ಬದಲಿಸಿಬಿಟ್ಟಳು!

'ನಡ್ಯವ್ವಾ... ಆಟ ಆಡಿದ್ದು ಸಾಕು... ಉಣ್ಣೋವಂತೆ...'

'ಹಸಿವಿಲ್ಲವ್ವಾ...'

'ಎಷ್ಟು ಹಸಿವೆ ಐತೊ ಅಷ್ಟು ಉಣ್ಣು ಬಾ...'

'ಆಮ್ಯಾಕೆ ಮತ್ತೆ ಮದ್ವೆ ಆಟ ಆಡೋಣು...?'

'ಆಗಲ್ಲವ್ವಾ...'

'ಆಗ ಪ್ರಸಾದಪ್ಪ ಬಂದು ಸೇರದ್ರ ಎಷ್ಟು ಛಂದ ಅಲ್ಲವ್ವಾ...? ನಂಗೆ ಪ್ರಸಾದಪ್ಪ ಹಿಡಸ್ತಾರವ್ವಾ... ಮಸ್ತ... ಅವ್ರ ಯಾಕೆ ನಮ್ಮ ಮನೀಗೆ ಬರವೊಲ್ರು...'

'ಅವ್ರಿಗೆ ಟೇಂ ಇರಲ್ಲ... ಬಾಳಾ ಕೆಲ್ಸ...'

'ಅಲ್ಲ– ಅವ್ರಿಗೆ ಜಡ್ಡಾಗದೆ. ನೋಡು, ಹ್ಯಾಂಗ ಸುಸ್ತಾಗಿ ಇರ್‍ತಾರ... ಯಾವಾಗ್ಲೂ ಎದೀ ಮ್ಯಾಗೆ ವಸ್ತ್ರ ಹಾಕ್ಕೋತಾರೆ... ಚಳಿ ಆಗ್‌ತೈತಾ...? ಪಾಪ, ಎದೀ ನೋಯುತ್ತೊಯಾನೊ... ಕೈ ಇಟ್ಕೋಂಡಿರ್‍ತಾರ, ಎದಿಮ್ಯಾಗೆ...'

'ಹೌದವ್ವ... ಅವ್ರು ಜಡ್ಡಾಗಾರ...'

'ಕಹಿ ಔಷಧಿ ಮಾಮಾಗೆ ಹೇಳಿ ಔಷಧ ಕೊಡಸ್ಬೇಕವ್ವಾ...'

'ಆಯ್ತುವ್ವಾ... ಈಗ ನೀನು ಉಣ್ಣಲಿಕ್ಕೆ ಬಾರವ್ವಾ...'

ಪ್ರಸಾದನಿಗೆ, ಅವನ ಆರೋಗ್ಯದ ಕಾಳಜಿಯನ್ನು ಶಿವಣ್ಣನ ಕೈಗೆ ಒಪ್ಪಿಸಬೇಡ ಎಂದು ಹೇಳಲು ಗಂಗೆ ಕಾತುರಳಾದಳು. ಅವನನ್ನು ಭೇಟಿಯಾಗಲು ಸೂಕ್ತ ಸ್ಥಳ ಯಾವುದು ಎಂದು ಹೊಳೆಯಲಿಲ್ಲ. ಏಕೆಂದರೆ ತಾವಿಬ್ಬರೇ ಮಾತಾಡುತ್ತಿರುವುದು ಯಾರಾದರೂ ನೋಡಿದರೆ ಪ್ರಸಾದನ ಹೆಸರು ಹಾಳಾಗಿ ಹೋಗುವುದು. ಎದುರಿಗೇ ಅವನು ಇದ್ದರೂ ಎಂದೂ ಅವನೊಡನೆ ಬಾಯಿ ತೆರೆಯುತ್ತಿರಲಿಲ್ಲ. ತನ್ನ ಹೆಸರು ಕೆಟ್ಟಿದೆ. ಆದರೆ ಅವನ ಹೆಸರು ಒಳ್ಳೆ ಸ್ಥಾನದಲ್ಲಿ ಈಗಲೂ ಸಹ ಇದೆ. ಅವನನ್ನು ಉಚ್ಛಸ್ಥಾನದಿಂದ ಇಳಿಯುವಂತೆ ಮಾಡಲು ತಾನು ವಾಹಕಳಾಗಬಾರದು. ಏನು ಮಾಡಲಿ ಎಂದು ಆಲೋಚಿಸುತ್ತಿರುವಾಗ, ಅವನನ್ನು ಭೆಟ್ಟಿಯಾಗಲು ಒಂದು ಸುರಕ್ಷಿತ ಸ್ಥಳ ಅವಳಿಗೆ ನೆನಪಿಗೆ ಬಂದಿತು.

ಅದು, ಆ ಹಳೇ ಕಾಲದ ಕೊಳವಿದ್ದ ತೋಟ. ಅವಳ ಗಾಡಿಖಾನೆಯಿಂದ ಅದು ಕಾಣುತ್ತಿತ್ತು. ಪ್ರಸಾದ ಆ ತೋಟಕ್ಕೆ ಬಂದು ಹೋಗುವ ವೇಳೆಯನ್ನು ಅವಳು ಗಮನಿಸಿದ್ದಳು. ಒಂದು ದಿನ ಬೆಳಗ್ಗೆ ಮಗಳಿಗೆ ರಜೆ ಇದ್ದಾಗ ತೋಟಕ್ಕೆ ತನ್ನನ್ನು ಭೆಟ್ಟಿಯಾಗಲು ಬರುವಂತೆ ದೇವಸ್ಥಾನದಲ್ಲಿ ಕಂಡಾಗ ಅವನಿಗೆ ತಿಳಿಸಿದಳು. ಆ ದಿನ ಇಂದ್ರಾ ಗಾಂಧಿಯನ್ನು ತೋಟಕ್ಕೆ ವೇಳೆಗೆ ಸರಿಯಾಗಿ ಕರೆದುಕೊಂಡು ಹೊರಟುಬಿಟ್ಟಳು.

ತೋಟ ಬಂಗ್ಲೆ ಹಿಂದಿನ ರಸ್ತೆಯ ಇಳಿಜಾರಿನಾಚೆಯಲ್ಲಿದ್ದು, ಆ ಕಚ್ಚಾ ಮಣ್ಣು ರಸ್ತೆ ಯಾರೂ ಅಷ್ಟಾಗಿ ಬಳಸದಿದ್ದರಿಂದ ಅದಕ್ಕೆ ಟಾರಿನ

## ಭಕ್ತಿ

ಗುಡಿಯಲ್ಲಿರುವ
ತಾಯಿಗೆ ನಿತ್ಯ
ಪೂಜೆ ವಂದನೆ
ತನ್ನನ್ನೇ 'ಗರ್ಭ' ಗುಡಿಯಲ್ಲಿ
ಇರಿಸಿದ್ದ ತಾಯಿಗೆ
ಮಾತ್ರ ತೀರದ ನಿಂದನೆ

★ ಶುಭದ



ವಿಜಯ